★★★

"ಓಹೋಹೋ... ಏನು ಶಿಶಿರಣ್ಣೋರ್ ಸವಾರಿ ಎಲ್ಲಿಗೋ ಹೊಂಟಂಗಿದೆ?"

ಗಾಳಿ, ಮಳೆಗಳೊಂದಿಗೆ ಸೆಣೆಸುತ್ತಾ ಛತ್ರಿಯನ್ನು ಒಮ್ಮೆ ಅತ್ತ, ಇಮ್ಮೆ ಇತ್ತ ಹಿಡಿಯುತ್ತಾ ನಡೆಯುತ್ತಿದ್ದ ಶಿಶಿರನನ್ನು ನೋಡಿದ ಅಂಗಡಿಯ ಸೋಮಣ್ಣ ಗಟ್ಟಿಯಾಗಿ ಕೇಳಿದ.

"ಏನಿಲ್ಲ ಸೋಮಣ್ಣ... ಇಲ್ಲೇ ನೊಣಬೂರಿಗೆ ಹೊರಟಿದ್ದೆ. ಮತ್ತೆ ಆರಾಮಾ?..." ಎನ್ನುತ್ತಾ ಶಿಶಿರ ಅವನ ಅಂಗಡಿಯ ಸೂರನ್ನು ಹೊಕ್ಕ. ಚಿಕ್ಕಂದಿನಿಂದಲೂ ನೋಡುತ್ತಾ ಬಂದಿರುವ, ತೊಂಬತ್ತರ ದಶಕದ ಬಣ್ಣವಿನ್ನೂ ಮಾಸದ ಅಂಗಡಿಯದು. ಹೆಚ್ಚೆಂದರೆ ಎರಡು ಮೂರು ಬಾರಿ ಬಣ್ಣ ಹೊಡೆದಿದ್ದನ್ನು ಬಿಟ್ಟರೆ ಹೆಚ್ಚೇನೂ ಬದಲಾಗದೆ, ತನ್ನ ಬಾಲ್ಯದ ಜೀವಂತ ಸ್ಮಾರಕದಂತೆ ಕಾಣುವ ಆ ಅಂಗಡಿಯನ್ನು ಕಂಡರೆ ಶಿಶಿರನಿಗೆ ಅದೇನೋ ಒಂಥರಾ ಪ್ರೀತಿ. ಶೀಟಿನ ತಗಡುಗಳನ್ನಿಟ್ಟು ಕಟ್ಟಿದ ಮಾಡಿನ ಕೆಳಗಿನ ಮರದ ಬೆಂಚಿನ ಮೇಲೆ ಕುಳಿತುಕೊಂಡು ಎದುರುಗಡೆಯಿರುವ ರಸ್ತೆಯನ್ನು ನೋಡುತ್ತಾ ಸೋಮಣ್ಣ ಮಾಡಿ ಕೊಡುವ ಬಿಸಿಬಿಸಿ ನೀರುಳ್ಳಿ ಬಜೆಯನ್ನು ಕಚ್ಚುವುದು ಅವನು ಜೀವನದಲ್ಲಿ ಅತೀ ಖುಷಿಯಿಂದ ಮಾಡುವ ಕೆಲವೇ ಕೆಲವು ಚಟುವಟಿಕೆಗಳಲ್ಲೊಂದು. ಅಂಗಡಿಯ ಗೋಡೆಯ ಮೇಲೆ ಮಾಲೆಮಾಲೆಯಾಗಿ ನೇತಾಡುತ್ತಿರುವ ಚಿಲ್ಲರೆ ತಿಂಡಿಗಳ ಪೈಕಿ ತನ್ನ ಬಾಲ್ಯಕ್ಕೆ ಸಂಬಂಧಿಸಿದ್ದು ಯಾವುದಾದರೂ ಇದೆಯೇನೋ ಎಂದು ಹುಡುಕುತ್ತಲೇ ಮರದ ಬೆಂಚಿನ ಮೇಲೆ ಕೂತು "ಒಂದು ಬಿಸಿಬಿಸಿ ಚಾ" ಎಂದು ಆರ್ಡರ್ ಮಾಡಿದ.

ಕಂಬಳಿ ಕೊಪ್ಪೆ ಹೊದ್ದ ಕೆಲಸದಾಳುಗಳ ಸಾಲು ಎದುರುಗಡೆ ರಸ್ತೆಯಲ್ಲಿ ಮುದುರಿಕೊಂಡು ನಡೆಯುತ್ತಿತ್ತು. ಅವರನ್ನು ತೋಯಿಸುವ ಹಟದಲ್ಲಿ ಟಪಟಪನೆ ಬೀಳುತ್ತಿದ್ದ ಮಳೆಯ ಹನಿಗಳು ಆ ಕಂಬಳಿ ಕೊಪ್ಪೆಯ ಕರಡಿ ಚರ್ಮದಂತಹಾ ಕಪ್ಪು ಚುಂಗುಗಳೊಳಗೆ ನುಸುಳಿ ಅದೃಶ್ಯವಾಗುತ್ತಿದ್ದವು. ರಸ್ತೆ ಬದಿಯ ತೋಡಿನಲ್ಲಿನ ನೀರು ಝುಳ್ಳೆಂಬ ಕೂಗು ಹೊರಡಿಸುತ್ತಾ ಉತ್ಸಾಹದಲ್ಲಿ ಓಡುತ್ತಿತ್ತು.

"ಓಯ್ ರಮೇಶಾ... ಕಡೀಗೆ ದನ ವಾಪಸ್ ಬಂತನೋ ನೆನ್ನೆ?"

ಬುರುಬುರು ನೊರೆ ಲೋಟದ ತುತ್ತತುದಿಯನ್ನು ತಲುಪುವಂತೆ ಇಷ್ಟೆತ್ತರದಿಂದ ಚಹಾವನ್ನು ಸುರಿಯುತ್ತಲೇ ಸೋಮಣ್ಣ ಕೂಗಿ ಕೇಳಿದ ಪ್ರಶ್ನೆಗೆ ಕೆಳಗಡೆ ರಸ್ತೆಯಲ್ಲಿ ನಡೆಯುತ್ತಿದ್ದ ಆಳುಗಳ ಸಾಲಿನ ನಡುವಿನಿಂದ ಕಂಬಳಿ ಕೊಪ್ಪೆಯೊಂದು ತಲೆಯೆತ್ತಿ "ಹೋ ಬಂತು" ಎಂದಿತು. ಅದರ ಜೊತೆಗೇ ಮತ್ತೊಂದಿಷ್ಟು ಮುಖಗಳು ಇತ್ತ ಅಂಗಡಿಯತ್ತ ನೋಡಿ ಎಲೆ ಅಡಿಕೆಯಿಂದ ಕೆಂಪಾದ ಹಲ್ಲುಗಳನ್ನು ಕಿರಿದು ಮತ್ತೆ ಕೊಪ್ಪೆಯೊಳಗೆ ಸೇರಿಕೊಂಡವು.

"ಮಜ್ಜೀಹೊಳೆಲಿ ನೆನ್ನೆ ಯಾವ್ದೋ ದನ ತೇಲ್ಕೊಂಡು ಹೋಗ್ತಿತ್ತಂತೆ. ನಮ್ ಸೀನ, ಪದ್ದು ಹಿಡ್ಯೋಕೆ ನೋಡಿದ್ರೂ ಆಗ್ಲೀಲ್ವಂತೆ. ಇವ್ನ್ ಬೇರೆ ದನ ಮನೇಗ್ ಬಂದಿಲ್ಲಾಂತಿದ್ದ..."

ಚಾದ ಲೋಟ ಶಿಶಿರನ ಕೈಗಿಡುತ್ತಾ ನುಡಿದ ಸೋಮಣ್ಣ. ಮಳೆಯ ಚಳಿಯೊಂದಿಗೆ ಸೆಣೆಸುವಂತೆ ಬಿಸಿಬಿಸಿ ಹಬೆಯನ್ನು ಸೂಸುತ್ತಿದ್ದ ಚಾವನ್ನು ತುಟಿಗಿಟ್ಟುಕೊಂಡ ಶಿಶಿರನಿಗೆ ಇದೆಲ್ಲ ಒಂದು ಸುಂದರ ಚಲನಚಿತ್ರದಂತೆ, ತಾನೂ ಈ ಕ್ಷಣಕ್ಕೆ ಈ ಚಲನಚಿತ್ರದ ಭಾಗವಾಗಿರುವಂತೆ ಭಾಸವಾಗತೊಡಗಿತು. ಈ ಅಂಗಡಿಯ ಕಟ್ಟೆ, ಇಲ್ಲಿಂದ ಕಾಣುವ ಹಳ್ಳಿಯ ಚಿತ್ರ, ಈ ಮಳೆ, ಕೆಲಸದಾಳುಗಳು, ತನಗೊಂದು ಹನಿ ಹಾಲನ್ನೂ ಕೊಡದ ಯಾರದೋ ಮನೆಯ ದನದ ಮೇಲೆ ಇನ್ಯಾರಿಗೋ ಇರುವ ಕಾಳಜಿ, ವ್ಯವಹಾರವನ್ನು ಮೀರಿದ ಬಂಧವೊಂದರಲ್ಲಿ ಒಬ್ಬರಿಗೊಬ್ಬರು ಬೆಸೆದುಕೊಂಡಿರುವ ಇಲ್ಲಿನ ಸಂಸ್ಕೃತಿ ಆ ಪಟ್ಟಣದಲ್ಲೇಕೆ ಇವೆಲ್ಲಾ ಇಲ್ಲ?

ಹೀಗೆಲ್ಲ ಯೋಚಿಸುತ್ತಿರುವಂತೆಯೇ ಶಿಶಿರನ ಕಣ್ಣು ರಸ್ತೆಯ ಆಚೆ ದಿಬ್ಬದಲ್ಲಿರುವ ಮನೆಯತ್ತ ಹೋಯಿತು. ಅಲ್ಲಿ ಪಾರದರ್ಶಕ ರೈನ್ ಕೋಟ್ ತೊಟ್ಟ ಅಪರಿಚಿತ ಆಕೃತಿಯೊಂದು ಕೈಯಲ್ಲೊಂದು